# ಕರ್ನಾಟಕ ನಾಟಕ ಪ್ರದರ್ಶನಗಳ ನಿಯಮಗಳು, 1965

## ನಿಯಮಗಳ ಅನುಕ್ರಮಣಿಕೆ

**ನಿಯಮಗಳುಃ**


1. ಹೆಸರು

2. ಪರಿಭಾಷೆಗಳು

3. ನೋಟೀಸು ಮತ್ತು ಆದೇಶಗಳ ಜಾರಿಯ ವಿಧಾನ

4. ರಿಜಿಸ್ಟರಿನ ನಿರ್ವಹಣೆ

5. ಇತರ ಪ್ರಾಧಿಕಾರಗಳಿಗೆ ಕಳುಹಿಸಬೇಕಾದ ಆದೇಶದ ಪ್ರತಿಗಳು

6. ಯಾವುದೇ ಪ್ರದರ್ಶನಕ್ಕೆ ಹೋಗುವ ಮತ್ತು ಅದನ್ನು
ಪರಿಶೀಲಿಸುವ ಅಧಿಕಾರ

**ಅನುಬಂಧ.**


**ಗೃಹ ಸಚಿವಾಲಯ**

***ಅಧಿಸೂಚನೆ**

**ಸಂಖ್ಯೆ : ಹೆಚ್‌ಡಿ. 10 ಸಿಎನ್‌ಪಿ 64, ದಿನಾಂಕ 21ನೇ ಜನವರಿ, 1966**

**ಜಿಎಸ್‌ಆರ್ 830.–** ಕರ್ನಾಟಕ ನಾಟಕ ಪ್ರದರ್ಶನಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 39)ರ 14ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ:–

*ದಿನಾಂಕ 03.02.1966ರ ಕರ್ನಾಟಕ ರಾಜಪತ್ರದಲ್ಲಿ ಪ್ರಕಟವಾಗಿದೆ. ಅಧಿಸೂಚನೆಯ ಸಂಖ್ಯೆ ಹೆಚ್‌ಡಿ 10 ಸಿಎನ್‌ಪಿ 64, ದಿನಾಂಕ 21.01.1966ರ ಪುಟ 610– 611 ನೋಡಿ.

## ನಿಯಮಗಳು

**1. ಹೆಸರು.–** ಈ ನಿಯಮಗಳನ್ನು ಕರ್ನಾಟಕ ನಾಟಕ ಪ್ರದರ್ಶನಗಳ ನಿಯಮಗಳು, 1965 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದಹೊರತು,–

(1) "ಅಧಿನಿಯಮ" ಎಂದರೆ ಕರ್ನಾಟಕ ನಾಟಕ ಪ್ರದರ್ಶನಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 39);

(2) "ಪ್ರಕರಣ" ಎಂದರೆ ಈ ಅಧಿನಿಯಮದ ಒಂದು ಪ್ರಕರಣ.

**3. ನೋಟೀಸು ಮತ್ತು ಆದೇಶಗಳ ಜಾರಿಯ ವಿಧಾನ.–** 3ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗಿನ ಪ್ರತಿಯೊಂದು ನೋಟೀಸಿನ ಒಂದು ಪ್ರತಿಯನ್ನು ಮತ್ತು 3ನೇ ಪ್ರಕರಣದ (2)ನೇ ಉಪ–ಪ್ರಕರಣದ (ಬಿ) ಖಂಡದ, 4ನೇ ಪ್ರಕರಣದ (1)ನೇ ಉಪ–ಪ್ರಕರಣದ, 8ನೇ ಪ್ರಕರಣದ (1)ನೇ ಉಪ–ಪ್ರಕರಣದ ಮತ್ತು 9ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು, ದಂಡ ಪ್ರಕ್ರಿಯಾ ಸಂಹಿತೆ, 1898 (1898ರ ಕೇಂದ್ರ ಅಧಿನಿಯಮ 5) ರಲ್ಲಿ ಸಮನುಗಳ ಜಾರಿಗೆ ಉಪಬಂಧಿಸಲಾದ ವಿಧಾನದಲ್ಲಿ ಸದರಿ ಪ್ರಕರಣಗಳಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳಿಗೆ ಜಾರಿ ಮಾಡತಕ್ಕದ್ದು.

**4. ರಿಜಿಸ್ಟರಿನ ನಿರ್ವಹಣೆ.–** 4ನೇ ಪ್ರಕರಣದ ಮೇರೆಗೆ ನಿಷೇಧಿಸಲಾದಂಥ ಆಕ್ಷೇಪಾರ್ಹ ಪ್ರದರ್ಶನಗಳ ಪೂರ್ಣ ವಿವರಗಳನ್ನು ತೋರಿಸುವ ಒಂದು ಖಾಯಂ ವಿಶೇಷ ರಿಜಿಸ್ಟರನ್ನು, ಜಿಲ್ಲಾಧಿಕಾರಿಯ ಕಛೇರಿಯಲ್ಲಿ ಈ ನಿಯಮಗಳಿಗೆ ಲಗತ್ತಿಸಿದ ನಮೂನೆಯಲ್ಲಿ ನಿರ್ವಹಿಸತಕ್ಕದ್ದು.

**5. ಇತರ ಪ್ರಾಧಿಕಾರಗಳಿಗೆ ಕಳುಹಿಸಬೇಕಾದ ಆದೇಶದ ಪ್ರತಿಗಳು.–** ಜಿಲ್ಲಾಧಿಕಾರಿಯು ಹೊರಡಿಸಿದ ನಿಷೇಧಾಜ್ಞೆಯ ಒಂದು ಪ್ರತಿಯನ್ನು ಮಾಹಿತಿಗಾಗಿ ಇತರ ಜಿಲ್ಲಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

**6. ಯಾವುದೇ ಪ್ರದರ್ಶನಕ್ಕೆ ಹೋಗುವ ಮತ್ತು ಅದನ್ನು ಪರಿಶೀಲಿಸುವ ಅಧಿಕಾರ.–** ತಹಶೀಲ್ದಾರರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಕಂದಾಯ ಇಲಾಖೆಯ ಯಾರೇ ಅಧಿಕಾರಿಯು ಮತ್ತು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಪೊಲೀಸ್ ಇಲಾಖೆಯ ಯಾರೇ ಅಧಿಕಾರಿಯು, ಯಾವುದೇ ರೂಪಕವನ್ನು, ಮೂಕಾಭಿನಯವನ್ನು ಅಥವಾ ಇತರ ನಾಟಕವನ್ನು ಪ್ರದರ್ಶಿಸುವಂಥ ಯಾವುದೇ ಸಾರ್ವಜನಿಕ ಸ್ಥಳಕ್ಕೆ ಪ್ರದರ್ಶನದ ಸ್ವರೂಪವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅದನ್ನು ನೋಡಲು ಪ್ರವೇಶ ಮಾಡತಕ್ಕದ್ದು.

**ಅನುಬಂಧ**

(4ನೇ ನಿಯಮ ನೋಡಿ)

1. ಕ್ರಮಸಂಖ್ಯೆ
2. ಪೊಲೀಸರಿಂದ ಮೊದಲ ಮಾಹಿತಿ ವರದಿಯನ್ನು ಸ್ವೀಕರಿಸಿದ ದಿನಾಂಕ
3. ಪ್ರದರ್ಶನದ ಹೆಸರು
4. ಕರ್ತೃವಿನ ಹೆಸರು
5. ಈ ಅಧಿನಿಯಮದ 4ನೇ ಪ್ರಕರಣದ ಮೇರೆಗೆ ಆದೇಶ ಹೊರಡಿಸಲು ಕಾರಣಗಳು
6. ಆದೇಶ ಹೊರಡಿಸಿದ ದಿನಾಂಕ
7. ಆದೇಶವನ್ನು ಯಾರಿಗೆ ಜಾರಿಗೊಳಿಸಬೇಕಾಗಿದೆಯೋ ಆ ಸಂಘಟಕರು ಅಥವಾ ಪ್ರಮುಖ ವ್ಯಕ್ತಿಗಳು, ಮುಂತಾದವರ ಹೆಸರುಗಳು
8. ಆದೇಶವನ್ನು ಜಾರಿಗೊಳಿಸಿದ ವಾಸ್ತವಿಕ ದಿನಾಂಕ
9. ಜಾರಿಯ ವಿಧಾನ
10. ಪ್ರದರ್ಶನವನ್ನು ನಿಷೇಧಿಸಲಾದ ಸ್ಥಳ
11. ಪ್ರದರ್ಶನವನ್ನು ನಿಷೇಧಿಸಲಾದ ಅವಧಿ
12. ಷರಾ.

* * *

The above translation of the Karnataka Dramatic Performances Act, 1964 (39 of 1964) and the Karnataka Dramatic Performances Rules 1965 shall be the authoritative text in the Kannada Language under section 5A of the Karnataka official Language Act, 1963 (Karnataka Act No.26 of 1963).

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 320

**ಜಿ.ಕೆ. ಬೋರೆಗೌಡ**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.